

ಪತ್ನಿ: ಕಾರಣವಿಲ್ಲದೆ ಕುಡಿಯುವುದಿಲ್ಲ ಅಂತೀರಿ. ಮತ್ತೆ ಇಂದೇಕೆ ಇಷ್ಟೊಂದು ಕುಡಿದು ಬಂದಿರುವಿರಿ?
ಪತಿ: ದೀಪಾವಳಿ ಹಬ್ಬ ಹತ್ತಿರ ಬಂತಲ್ವಾ?
ಪತ್ನಿ: ದೀಪಾವಳಿ ಹತ್ತಿರ ಬಂದರೆ...?
ಪತಿ: ಮಕ್ಕಳಿಗೆ ರಾಕೆಟ್ ಬಿಡಲು ಖಾಲಿ ಬಾಟಲ್ ಬೇಕಲ್ಲಾ. ಅದಕ್ಕೇ ಕುಡಿಯಲೇಬೇಕಾಯಿತು ಕಣೆ!

ಯಜಮಾನಿ: ಇವತ್ತು ನೀನು ಚಪಾತಿಗೆ ತುಪ್ಪ ಜಾಸ್ತಿ ಹಾಕಿರುವೆ
ಅಡುಗೆಯಾಳು: ತಪ್ಪಾಯ್ತು ಅಮ್ಮಾವ್ರೆ. ನಾನು ನನ್ನ ಚಪಾತಿಯನ್ನು ಕಣ್ತಪ್ಪಿ ನಿಮಗೆ ನೀಡಿದ್ದೇನೆಂದೆನಿಸುತ್ತದೆ...!

ಕೆಮಿಸ್ಟ್ (ಅಸಮಾಧಾನದಿಂದ): ನಿನಗೆಷ್ಟು ಬಾರಿ ಹೇಳಲಿ. ತಲೆನೋವಿನ ಮಾತ್ರೆ ಬೇಕಿದ್ದರೆ ವೈದ್ಯರ ಚೀಟಿ ತರಬೇಕೆಂದು... ಪ್ರತಿ ಸಲ. ಮದುವೆಯ ಸರ್ಟಿಫಿಕೇಟ್ ತೋರಿಸಿ ನನಗೇಕೆ ತಲೆನೋವು ತರಿಸುತ್ತಿರುವೆ?!...

ವಿವಾಹಿತ ಪುರುಷರಿಗೊಂದು ಸಲಹೆ...

ನಿಮಗೆ ನಿಮ್ಮ ಹಣ ದ್ವಿಗುಣಗೊಳಿಸಬೇಕೆಂದಿದ್ದರೆ, ಬೆಳಿಗ್ಗೆ ಆಫೀಸಿಗೆ ಹೋಗುವಾಗ 1000 ರೂ. ಪತ್ನಿಯ ಬಳಿ ಕೊಟ್ಟು ಸಂಜೆ ಮನೆಗೆ ಬಂದು ಲೆಕ್ಕ ಕೇಳಿ.

2000 ರೂಪಾಯಿಯ ಲೆಕ್ಕ ಸಿಗುತ್ತದೆ...!

ಪತ್ನಿ (ಮೊಬೈಲಿನಲ್ಲಿ): ಹಲೋ, ಎಲ್ಲಿದ್ದೀರಿ ನೀವು?
ಪತಿ: ಆಫೀಸಿನಲ್ಲಿ, ನೀನು?
ಪತ್ನಿ: ಹೋಟೆಲಿನಲ್ಲಿ. ನೀವು ಕೂತಿರುವ ಟೇಬಲ್ಲಿಂದ ನಾಲ್ಕು ಟೇಬಲ್ ಹಿಂದುಗಡೆ.... ಮತ್ತು ಪುಟ್ಟ ಕೇಳ್ತಾ ಇದ್ದಾನೆ. 'ಅಪ್ಪನ ಜೊತೆಗೆ ಆ ಅತ್ತೆ ಯಾರೂಂತ...'!

ಸಮಾರಂಭವೊಂದರಲ್ಲಿ ಆಯೋಜಕರಿಗೆ ಆಮಂತ್ರಿತರಿಗಿಂತ ಹೆಚ್ಚು ಜನರು ಹಾಜರಿರುವಂತೆ ತೋರಿತು.

ಅವರು ಸ್ಟೇಜ್ ಹತ್ತಿ ಅನೌನ್ಸ್ ಮಾಡಿದರು. 'ವಧುವಿನ ಕಡೆಯವರು ದಯವಿಟ್ಟು ಸ್ಟೇಜಿನ ಬಲ ಬದಿಗೆ ಬಂದು ನಿಲ್ಲಬೇಕು'

25–30 ಜನರು ಅತ್ತ ಹೋಗಿ ನಿಂತರು.

ನಂತರ ಅವರು ಹೇಳಿದರು, 'ಈಗ ವರನ ಕಡೆಯವರು ದಯವಿಟ್ಟು, ಸ್ಟೇಜಿನ ಎಡ ಬದಿಗೆ ಬಂದು ನಿಲ್ಲಬೇಕು'

30–35 ಜನರು ಅಲ್ಲಿ ಹೋಗಿ ನಿಂತರು.

ಈಗ ಅವರು ಸ್ಟೇಜಿನ ಕೆಳಗಿಳಿದು ಬಡಿಗೆಯೆತ್ತಿ ಅವರೆಲ್ಲರಿಗೂ ಯದ್ವಾ ತದ್ವಾ ಬಡಿಯಲಾರಂಭಿಸಿದರು

ಅವರೆಲ್ಲರೂ ಒಕ್ಕೊರಲಿನಿಂದ ಕೂಗಿದರು, 'ನಮ್ಮನ್ನೇಕೆ ಹೊಡೆಯುತ್ತಿದ್ದೀರಿ...?

ಆಯೋಜಕರೆಂದರು, 'ಬಡ್ಡೀ ಮಕ್ಳಾ, ಇದು ನಿವೃತ್ತ ಅಧಿಕಾರಿ ಗುಂಡಪ್ಪನವರ ಬೀಳ್ಕೊಡುಗೆ ಸಮಾರಂಭ...'!

ಒಬ್ಬಾತನ ಪತ್ನಿ ತೀರಿಕೊಂಡಳು.

ಶೋಕ ಸಭೆಯಲ್ಲಿ ಮಿತ್ರನೋರ್ವ ವಿಚಾರಿಸಿದ. 'ಇದು ಹೇಗಾಯಿತು?'
ಪತಿ: ಬೆಳಿಗ್ಗೆ ಚಹಾ ಕುಡಿಯುತ್ತಿದ್ದಳು ಮತ್ತು ಅಚಾನಕ್ಕಾಗಿ ಹಾಗೇ ಹೊರಟು ಹೋದಳು, ಬೇರೇನೂ ಇಲ್ಲ.

ಮಿತ್ರ (ಕೊಂಚ ವೇಳೆ ಮೌನ ವಹಿಸಿದ ಬಳಿಕ): ಆ ಚಹಾದ ಹುಡಿಯೇನಾದರೂ ಉಳಿದಿದಯಾ...?!



ಮ್ಯಾನೇಜರ್ ಒಂದು ಜೋಕ್ ಹೊಡೆದರು. ಆಗ ಒಬ್ಬಾತನನ್ನು ಹೊರತು ಪಡಿಸಿ ಅವರ ಗುಂಪಿನ ಎಲ್ಲಾ ಸದಸ್ಯರೂ ನಕ್ಕರು.

ಮ್ಯಾನೇಜರ್ ಆತನನ್ನು ವಿಚಾರಿಸಿದರು, 'ಏಕೆ, ಜೋಕ್ ಅರ್ಥವಾಗಲಿಲ್ವೇ?'

ಆತ ಉತ್ತರಿಸಿದ, 'ನಾನು ನಿನ್ನೆ ರಾಜೀನಾಮೆ ನೀಡಿರುತ್ತೇನೆ....'!

**(ಸಂಗ್ರಹ) ರಮಣ್ ಶೆಟ್ಟಿ ರೆಂಜಾಳ್, ಮುಂಬೈ**


ಸಂಧಿಲಿನ್
SANDHILIN सन्धिलिन

ಗಂಟು ನೋವು, ಬೆನ್ನು ನೋವು, ಮಾಂಸ ಖಂಡಗಳ ಸೆಳೆತ, ನರ, ವಾತ ಸಂಬಂಧಿ

ನೋವಿಗೆ ಶೀಘ್ರ ಪರಿಣಾಮಕಾರಿ

CLINICALLY PROVED




- ಜಿಡ್ಡು ರಹಿತ 'ಸಂಧಿಲಿನ್' ಎಣ್ಣೆಯನ್ನು ಆಯುರ್ವೇದದ ಋಷಿಮುನಿಪ್ರಣೀತ ಶಾಸ್ತ್ರೋಕ್ತವಾಗಿ, ಅತ್ಯಾಧುನಿಕ ತಂತ್ರಜ್ಞಾನವನ್ನು ಅಳವಡಿಸಿ ತಯಾರಿಸಲಾಗಿದೆ.
- ಇದು ಗಂಟುನೋವು, ಬೆನ್ನುನೋವು, ಉಳುಕು, ಮಾಂಸ ಖಂಡಗಳ ಸೆಳೆತ, ನರ, ವಾತ ಸಂಬಂಧಿ ನೋವುಗಳಿಗೆ ಪರಿಣಾಮಕಾರಿ.
- ತ್ವಚೆಗೆ ಹಿತಕರವಾಗಿದ್ದು ಚರ್ಮ ಅಥವಾ ಬಟ್ಟೆಯ ಮೇಲೆ ಯಾವುದೇ ಜಿಡ್ಡು, ಕಲೆಗಳು ಉಂಟಾಗುವುದಿಲ್ಲ.

ತಯಾರಕರು

SDM AYURVEDA PHARMACY

ISO / GMP CERTIFIED

ಶ್ರೀ ಧರ್ಮಸ್ಥಳ
ಮಂಜುನಾಥೇಶ್ವರ ಆಯುರ್ವೇದ ಫಾರ್ಮಸಿ
ಕುತ್ಪಾಡಿ – 574 118, ಉಡುಪಿ ಜಿಲ್ಲೆ, ಕರ್ನಾಟಕ
Ph / Fax: 0820 - 2520852
Email: sdmaph@gmail.com

ಇದು 'SDM ಆಯುರ್ವೇದ ಫಾರ್ಮಸಿ'ಯ ಉತ್ಕೃಷ್ಟ ಗುಣಮಟ್ಟದ ಉತ್ಪನ್ನ